# ಪರೂಲ್‌ಗೆ ಹೊಸ ವರ್ಷದ ಉಡುಗೊರೆ

ಕನ್ನಡ ಚಿತ್ರರಂಗದ ಪಾಲಿಗೆ 2016ರ ಮೊದಲ ಅಧ್ಯಾಯ ಭರ್ಜರಿಯಾಗಿ ಆರಂಭವಾಗುತ್ತಿದೆ, 'ಕಿಲ್ಲಿಂಗ್ ವೀರಪ್ಪನ್' ಚಿತ್ರದ ಮೂಲಕ. ಈ ಸಿನಿಮಾ ನಟಿ ಪರೂಲ್ ಯಾದವ್ ಅವರ ಹೊಸ ವರ್ಷದ ಸಂಭ್ರಮವನ್ನೂ ಹೆಚ್ಚಿಸಿದೆ. ಅವರ ಪಾಲಿಗೆ 'ಕಿಲ್ಲಿಂಗ್ ವೀರಪ್ಪನ್' ವೃತ್ತಿಜೀವನದಲ್ಲಿನ ಒಂದು ಹಿತವಾದ ತಿರುವು!

'ಗೋವಿಂದಾಯ ನಮಃ' ಚಿತ್ರದಲ್ಲಿ 'ಪ್ಯಾರ್‌ಗೆ ಆಗ್‌ಬುಟ್ಟೈತೆ' ಎಂದು ಕೋಮಲ್ ಅವರೊಂದಿಗೆ ಕಾಣಿಸಿಕೊಂಡ ಪರೂಲ್, ಆನಂತರ ಆರಕ್ಕೇರಲಿಲ್ಲ, ಮೂರಕ್ಕಿಳಿಯಲಿಲ್ಲ. ದೊರೆತ ಬಹುತೇಕ ಅವಕಾಶಗಳು ಗ್ಲಾಮರ್ ಅನಾವರಣದ ಸಾಧ್ಯತೆಗಳಾಗಿದ್ದವೇ ಹೊರತು, ಅವು ನಟಿಯಾಗಿ ಪರೂಲ್ ಅವರನ್ನು ಅರಳಿಸುವ ಚಿತ್ರಗಳಾಗಿರಲಿಲ್ಲ. ಯೋಗರಾಜ ಭಟ್‌ರ 'ವಾಸ್ತುಪ್ರಕಾರ' ಚಿತ್ರದಲ್ಲಿ ಜಗ್ಗೇಶ್‌ಗೆ ಜೋಡಿಯಾಗಿ ಕಿಲಾಡಿ ವಕೀಲಳ ಒಳ್ಳೆಯ ಪಾತ್ರ ದೊರೆತರೂ, ಆ ಸಿನಿಮಾದ ಸೋಲು ಪರೂಲ್‌ರ ಸೋಲಾಗಿಯೂ ಪರಿಣಮಿಸಿತು. ಇಂಥ ಸಂದರ್ಭದಲ್ಲಿ ಒಂದು ಒಳ್ಳೆಯ ಪಾತ್ರಕ್ಕಾಗಿ ಹಂಬಲಿಸುತ್ತಿದ್ದ ಅವರಿಗೆ 'ಕಿಲ್ಲಿಂಗ್ ವೀರಪ್ಪನ್' ನಿರೀಕ್ಷೆಯ ಚಿತ್ರವಾಗಿ ಪರಿಣಮಿಸಿದೆ.

ಪರೂಲ್‌ರ ಸಂಭ್ರಮಕ್ಕೆ ಬೇರೆ ಕಾರಣಗಳೂ ಇವೆ. ಮೊದಲ ಬಾರಿಗೆ ನಿರ್ದೇಶಕ ರಾಮ್‌ಗೋಪಾಲ್ ವರ್ಮಾ ಅವರ ಚಿತ್ರದಲ್ಲಿ ನಟಿಸಿದ್ದೇನೆ ಎನ್ನುವುದು ಅವರಿಗೆ ಅಭಿಮಾನದ ಸಂಗತಿ. 'ನೀವು ನನ್ನ ಸಿನಿಮಾದಲ್ಲಿ ನಟಿಸಬೇಕು' ಎಂದು ವರ್ಮಾ ಅವರು ಫೋನ್ ಮಾಡಿದ ಕ್ಷಣ ಅವರ ಮನಸ್ಸಿನಲ್ಲಿ ಒಂದು ಸವಿಸ್ವಪ್ನದಂತೆ ಉಳಿದುಬಿಟ್ಟಿದೆ. ಕೆಲವು ಕ್ಷಣ ವರ್ಮಾ ಅವರೊಂದಿಗೆ ನಿಜವಾಗಿಯೂ ಮಾತನಾಡುತ್ತಿದ್ದೇನಾ ಎನ್ನುವ ಅನುಮಾನವೂ ಅವರನ್ನು ಕಾಡಿತಂತೆ. ಯಾರೋ ತಮಾಷೆ ಮಾಡುತ್ತಿರಬೇಕು ಎನ್ನಿಸಿ, ಫೋನ್ ಕಟ್ ಮಾಡಿದರಂತೆ. ತನಗೆ ಫೋನ್ ಮಾಡಿದ್ದು ವರ್ಮಾ ಅವರೇ ಎನ್ನುವುದನ್ನು ಖಚಿತಪಡಿಸಿಕೊಂಡ ನಂತರ ಪರೂಲ್ ಮತ್ತೆ ತಾವೇ ಫೋನ್ ಮಾಡಿದರಂತೆ. ಆಮೇಲೆ ವರ್ಮಾ ಅವರು ಹೇಳಿದ್ದಕ್ಕೆಲ್ಲ ಪರೂಲ್ ಅವರ ಕಡೆಯಿಂದ 'ಎಸ್ ಎಸ್' ಎನ್ನುವ ಉತ್ತರ.





ಈವರೆಗಿನ ಚಿತ್ರಗಳಲ್ಲಿ ಕಾಲ್ಪನಿಕ ಪಾತ್ರಗಳಲ್ಲಷ್ಟೇ ನಟಿಸಿರುವ ಅವರು, ಮೊದಲ ಬಾರಿಗೆ ಜೀವಂತ ವ್ಯಕ್ತಿಯೊಬ್ಬರ ಪಾತ್ರಕ್ಕೆ ಜೀವ ತುಂಬಿದ್ದಾರೆ. 'ಇದು ನನ್ನ ಪಾಲಿಗೆ ಸವಾಲಿನ ಪಾತ್ರವಾಗಿತ್ತು. ಬದುಕಿರುವ ವ್ಯಕ್ತಿಯ ಪಾತ್ರ ಮಾಡುವುದು ತಮಾಷೆಯಲ್ಲ' ಎನ್ನುವ ಪರೂಲ್ ಅವರಿಗೆ, ಈ ಪಾತ್ರದ ಮೂಲಕ ತಮ್ಮೊಳಗಿನ ಕಲಾವಿದೆ ಸಾಕಷ್ಟು ಹೊರಹೊಮ್ಮಿರುವ ಸಮಾಧಾನವಿದೆ. ತಮ್ಮ ಪಾತ್ರದ ಮೂಲಕ ಈವರೆಗೆ ತೆರೆಮರೆಯಲ್ಲಿ ಉಳಿದಿರುವ ವ್ಯಕ್ತಿತ್ವವೊಂದು ಜಗತ್ತಿನ ಎದುರು ನಿಲ್ಲಲಿದೆ ಎನ್ನುವ ಪುಲಕವೂ ಅವರಿಗಿದೆ.

ಅಂದಹಾಗೆ, ಪರೂಲ್ ಮಾತ್ರವಲ್ಲ– ಚಿತ್ರದ ಪ್ರಮುಖ ಪಾತ್ರಗಳಲ್ಲಿ ನಟಿಸಿರುವ ಶಿವರಾಜ್‌ಕುಮಾರ್, ಯಜ್ಞಾ ಶೆಟ್ಟಿ ಹಾಗೂ ಸಂದೀಪ್ ಸೇರಿದಂತೆ ಎಲ್ಲರ ಬಾಯಲ್ಲೂ ನಿರ್ದೇಶಕ ವರ್ಮಾ ಅವರ ಗುಣಗಾನ. ಭಾರತೀಯ ಚಿತ್ರರಂಗದ ಜನಪ್ರಿಯ ನಿರ್ದೇಶಕರಲ್ಲಿ ಒಬ್ಬರಾದ ರಾಮ್‌ಗೋಪಾಲ್ ವರ್ಮಾ 'ಕಿಲ್ಲಿಂಗ್ ವೀರಪ್ಪನ್' ಮೂಲಕ ಕನ್ನಡ ಚಿತ್ರರಂಗವನ್ನು ಪ್ರವೇಶಿಸಿರುವ ಪುಲಕ ಎಲ್ಲರದು.

'ಕಿಲ್ಲಿಂಗ್ ವೀರಪ್ಪನ್' ವರ್ಮಾ ಅವರ ಮಹತ್ವಾಕಾಂಕ್ಷೆಯ ಚಿತ್ರವೂ ಹೌದು. 2006ರಿಂದಲೇ ಈ ಸಿನಿಮಾ ರೂಪಿಸಲು ಸಿದ್ಧತೆಗಳನ್ನು ಆರಂಭಿಸಿದ್ದ ಅವರು, ವೀರಪ್ಪನ್ ಕುರಿತು ಸಾಕಷ್ಟು ಅಧ್ಯಯನ ನಡೆಸಿದ್ದಾರೆ. ಸುಮಾರು ಹತ್ತು ವರ್ಷಗಳ ಅವರ ಶ್ರಮ ಪ್ರಸ್ತುತ ಬೆಳ್ಳಿತೆರೆಯ ಮೇಲೆ ಅನಾವರಣಗೊಳ್ಳುತ್ತಿದೆ.

'ಕಿಲ್ಲಿಂಗ್ ವೀರಪ್ಪನ್' ಸಿನಿಮಾ 2015ರ ಡಿಸೆಂಬರ್‌ನಲ್ಲೇ ಬಿಡುಗಡೆಯಾಗಬೇಕಿತ್ತು. ಕಾನೂನು ತೊಡಕುಗಳು ಎದುರಾದ ಕಾರಣ ಬಿಡುಗಡೆ ವಿಳಂಬವಾಯಿತು. ಕೊನೆಗೂ ಹೊಸ ವರ್ಷದ ಮುನ್ನುಡಿಯ ರೂಪದಲ್ಲಿ ವರ್ಮಾ ಅವರ ಸಿನಿಮಾ ತೆರೆಕಾಣುತ್ತಿದೆ. ■

**'ಕಿಲ್ಲಿಂಗ್ ವೀರಪ್ಪನ್' ಚಿತ್ರದಲ್ಲಿ ಜೀವಂತ ವ್ಯಕ್ತಿಯೊಬ್ಬರ ಪಾತ್ರದಲ್ಲಿ ನಟಿಸಿರುವ ಖುಷಿ ಪರೂಲ್ ಯಾದವ್ ಅವರದು. ಅವರ ಪಾಲಿಗೆ ಈ ಸಿನಿಮಾ ಹೊಸ ವರ್ಷದ ಬೆಳ್ಳಿಕಿರಣ!**





# ರಮೇಶ್ ಬಂದರು... ನೋಡಿಬಿಡಿ!



'ಮುಂದ...'– ಸಹೃದಯರ ಪ್ರಶ್ನೆ ಕೇಳಿಸಿತು ಎನ್ನುವಂತೆ ರಮೇಶ್ ಅರವಿಂದ್ ಮತ್ತೆ ಕಾಫಿ ಕಪ್ ಹಿಡಿದುಕೊಂಡು ಪ್ರತ್ಯಕ್ಷರಾಗಿದ್ದಾರೆ. 2015ರ ಡಿ. 26ರಿಂದಲೇ 'ಜೀ' ವಾಹಿನಿಯಲ್ಲಿ 'ವೀಕೆಂಡ್ ವಿತ್ ರಮೇಶ್' ಕಾರ್ಯಕ್ರಮದ ಎರಡನೇ ಋತು ಶುರುವಾಗಿದೆ. ಪ್ರತಿ ಶನಿವಾರ ಮತ್ತು ಭಾನುವಾರ ರಾತ್ರಿ 9ಕ್ಕೆ ಈ ಕಾರ್ಯಕ್ರಮ ಪ್ರಸಾರಗೊಳ್ಳಲಿದೆ.

ಕಿರುತೆರೆಯ ವಾಹಿನಿಗಳಲ್ಲಿ ಮನಸ್ಸನ್ನು ಕೆರಳಿಸುವ ಕಾರ್ಯಕ್ರಮಗಳೇ ಹೆಚ್ಚಿನ ಸಂಖ್ಯೆಯಲ್ಲಿ ಪ್ರಸಾರವಾಗುತ್ತಿರುವ ಸಂದರ್ಭದಲ್ಲಿ 'ವೀಕೆಂಡ್ ವಿತ್ ರಮೇಶ್' ಮನಸ್ಸನ್ನು ಅರಳಿಸುವ ರೂಪದಲ್ಲಿ ನೋಡುಗರ ಗಮನಸೆಳೆದಿದೆ. ಸೆಲೆಬ್ರಿಟಿಗಳನ್ನು ಪರಿಚಯಿಸುವ ಈ ಕಾರ್ಯಕ್ರಮದಲ್ಲಿ, ಮನರಂಜನೆಯ ಜೊತೆಗೆ ಮನೋವಿಕಾಸಕ್ಕೂ ಅವಕಾಶವಿದೆ. ನೋಡುಗರ ಮನಸ್ಸನ್ನು ಪ್ರಫುಲ್ಲಗೊಳಿಸುವುದು ಹಾಗೂ ಅವರಲ್ಲೂ ಸಾಧನೆಯ ಕಿಚ್ಚು ಹೆಚ್ಚಿಸುವುದು ಈ ಕಾರ್ಯಕ್ರಮದ ಪ್ರಮುಖ ಉದ್ದೇಶ.

'ವೀಕೆಂಡ್ ವಿತ್ ರಮೇಶ್' ಮೊದಲ ಆವೃತ್ತಿ ಅಪಾರ ಜನಪ್ರಿಯತೆ ಗಳಿಸಿತ್ತು. ಈ ಹಿನ್ನೆಲೆಯಲ್ಲಿ ಎರಡನೇ ಆವೃತ್ತಿ ಅಪಾರ ನಿರೀಕ್ಷೆಗಳನ್ನು ಮೂಡಿಸಿದೆ. ಈ ಋತುವಿನಲ್ಲಿ ಪ್ರಸಿದ್ಧರ ಜೊತೆಗೆ ಅಷ್ಟೇನೂ ಪ್ರಸಿದ್ಧರಲ್ಲದ ಸಾಧಕರನ್ನು ಪರಿಚಯಿಸುವ ಇರಾದೆ ರಮೇಶ್ ಅವರಿಗಿದೆ. ಕಿರುತೆರೆ ಜೊತೆಗೆ ಬೆಳ್ಳಿತೆರೆಯಲ್ಲೂ ರಮೇಶ್ ಸಕ್ರಿಯರಾಗಿದ್ದು, 'ಪುಷ್ಪಕ ವಿಮಾನ' ಹೆಸರಿನ ಚಿತ್ರವೊಂದರಲ್ಲಿ ನಟಿಸಲು ಒಪ್ಪಿಕೊಂಡಿದ್ದಾರೆ. ವಿಮಾನಗಳ ಬಗ್ಗೆ ಆಸಕ್ತಿ ಬೆಳೆಸಿಕೊಂಡ ವ್ಯಕ್ತಿಯೊಬ್ಬನ ಕಥೆ ಅವರಿಗೆ ಖುಷಿಕೊಟ್ಟಿದೆ.

■ ರಘು

